ಇ.ಪಿ ನಂ.:4/2013
ಪಿಡಬ್ಲ್ಯೂ - 4

ದಿನಾಂಕ 22-11-2019 ರಂದು ಸಾಕ್ಷಿಗೆ ಕರೆಸಿ ಪ್ರತಿಜ್ಞಾವಿಧಿ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ 3 ನೇ ಅರ್ಜಿದಾರರ ಪರ ಶ್ರೀ ಬಿ.ಬಿ ವಕೀಲರಿಂದ.**

ನನ್ನ ಮುಖ್ಯ ವಿಚಾರಣೆಯ ಶಪಥ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಎಲ್ಲಾ ಸಂಗತಿಗಳು ಸತ್ಯವಾಗಿರುತ್ತವೆ. ಅದನ್ನು ಓದಿಸಿ ಕೇಳಿ ತಿಳಿದುಕೊಂಡು ನೋಡಿ ಸಹಿ ಮಾಡಿರುತ್ತೇನೆ.

**ಪಾಟೀ ಸವಾಲುಃ ಡಿಕ್ರಿಧಾರಕರ ಪರ ಶ್ರೀ ಪಿ.ಕೆ ವಕೀಲರಿಂದ.**

ನಾನು ಶಾಲೆ ಕಲಿತಿಲ್ಲ. ನನ್ನ ಮನೆ ಕೊಳಕೂರು ಗ್ರಾಮದಲ್ಲಿದೆ. 1976-77 ನೇ ಇಸವಿಯಲ್ಲಿ ನನಗೆ 16 ವರ್ಷ ವಯಸ್ಸಾಗಿತ್ತು. ನಾನು ಲಾಡ್ಲೆಸಾನ ಗೆಳೆಯನಲ್ಲ ಎಂದರೆ ಸರಿ. ಲಾಡ್ಲೆಸಾಬನ ಮದುವೆಗೆ ಬಾ ಎಂದು ನನಗೆ ಯಾರು ಆಮಂತ್ರಣ ಕೊಟ್ಟಿಲ್ಲ ಎಂದರೆ ಸರಿ ಆದರೆ ನಾನು ಜೇವರ್ಗಿಯಲ್ಲಿ ಆದ ಲಾಡ್ಲೆಸಾಬನ ಮದುವೆಗೆ ಬಂದಿದ್ದೇನೆ. ಲಾಡ್ಲೆಸಾಬನ ಮದುವೆಯು ಬೇಗಂಬೀಯ ಜೊತೆ ಜೇವರ್ಗಿಯ ಅವನ ಮನೆಯಲ್ಲಿ ಆಗಿದೆ. ಲಾಡ್ಲೆಸಾಬನ ಮತ್ತು ಬೇಗಂಬೀಯ ಮದುವೆಯು ಯಾವ ದಿನ ಯಾವ ತಿಂಗಳು ಮತ್ತು ಯಾವ ವರ್ಷದಲ್ಲಿ ಆಗಿದೆ ಎನ್ನುವುದು ನನಗೆ ಗೊತ್ತಿಲ್ಲ. ಬೇಗಂಬೀ ಹಾಗೂ ಆಕೆಯ ಮಕ್ಕಳು ಮತ್ತು ಬಸವರಾಜನ ಮಾತುಕೇಳಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ. ಬೇಗಂಬೀ ಮತ್ತು ಲಾಡ್ಲೇಸಾಬನ ಮದುವೆಯಾಗಿದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ಸಾಕ್ಷಿದಾರರು ಹೇಳಿದಂತೆ ನನ್ನ ಉಕ್ತ ಲೇಖನಕ್ಕೆ ಕಂಪ್ಯೂಟರ್ ನಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ. ಹೇ.ಕೇ. ಸರಿ ಇರುತ್ತದೆ**

ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ